ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 20-02-2021 ರಂದು ಹಗದೂರು ವಾರ್ಡ್ ಸಂ: 84ರ ವಾರ್ಡ್ ಕಮಿಟಿಯು ಡಾ॥ ಶ್ರೀ.ಟಿ.ಎಂ.ರಮೇಶ್, ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ

1. ಡಾ॥ ಶ್ರೀ.ಟಿ.ಎಂ.ರಮೇಶ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎಸ್.ಸಂತೋಷ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವೈಟ್‌ಫೀಲ್ಡ್ ಉಪವಿಭಾಗ
3. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
4. ಶ್ರೀ.ಪ್ರಕಾಶ್ ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
5. ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
6. ಡಾ॥ ಸನಾ, ವೈಧ್ಯಾಧಿಕಾರಿಗಳು ಹಗದೂರು ಆರೋಗ್ಯ ಕೇಂದ್ರ
7. ಶ್ರೀ.ಶಿವಕುಮಾರ್, ಕಿರಿಯ ಆರೋಗ್ಯ ನಿರೀಕ್ಷಕರು, ಆರೋಗ್ಯ ಕೇಂದ್ರ
8. ಹಗದೂರು ವಾರ್ಡಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ

1. ಶ್ರೀ.ರಾಮಕೃಷ್ಣಾರೆಡ್ಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ರ.ಮೂ.ಭೂ.ಸೌ_ಬಿಬಿಎಂಪಿ)
2. ಶ್ರೀ.ಆನಂದ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
3. ಶ್ರೀ.ರಿಯಾಸ್ ಅನ್ವರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ.ಮಂಜುನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ_ಬಿಬಿಎಂಪಿ
7. ಶ್ರೀ.ಶ್ರೀನಿವಾಸ್, ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಭಾಗ_ಬಿಬಿಎಂಪಿ
8. ಆರಕ್ಷಣಾಧಿಕಾರಿಗಳು, ಕಾನೂನು ಮತ್ತು ಸುವ್ಯವಸ್ಥೆ / ಸಂಚಾರಿ ಇಲಾಖೆ
9. ಶ್ರೀ.ಮಂಜುನಾಥ್ ಹಾಗೂ ಶ್ರೀ.ನವೀನ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
10. ಕಂದಾಯ ಪರಿವೀಕ್ಷಕರು, ವೈಟ್‌ಫೀಲ್ಡ್ ಉಪವಿಭಾಗ_ಬಿಬಿಎಂಪಿ

1. ಹಿಂದಿನ ಸಭೆಯಲ್ಲಿ (ದಿನಾಂಕ: 10-02-2021) ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಇಂಪಿರಿಯಲ್ ಹೋಟೆಲ್ ಬ್ರೂಕ್ ಬಾಂಡ್ ಆರೋಗ್ಯ ಅಧಿಕಾರಿಗಳು ನೋಟೀಸ್ ಕೊಟ್ಟಿರುತ್ತಾರೆ. ವೈಟ್‌ಫೀಲ್ಡ್ ಪೊಲೀಸ್ ಇಲಾಖೆಯವರು ಕೈಗೊಂಡಿದ್ದು, ಹೋಟೆಲ್‌ನವರು ಚಿಮ್ಮಣಿಯನ್ನು ಬೇರೆ ಕಡೆಗೆ ತಿರುಗಿಸಿದ್ದು, ಇದರ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿರುತ್ತಾರೆ.

   ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು,

3. ಶಕ್ತಿ ಕೇಂದ್ರದ ಗಾಂಧೀಪುರ ಗ್ರಾಮದವರು ಕೋರಿರುವ ಮೇರೆಗೆ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವ ಕಾರ್ಯವನ್ನು ಟ್ರಾಫಿಕ್ ಪೊಲೀಸ್, ಆರೋಗ್ಯ ಅಧಿಕಾರಿಗಳು ಹಾಗೂ ಸಹಾಯಕ ಅಭಿಯಂತರರು ಮತ್ತು ಗ್ಯಾಂಗ್‌ಮೇನ್‌ಗಳನ್ನೊಳಗೊಂಡು ದಿನಾಂಕ: 23-02-2021 ರಂದು ನಿಗಧಿಪಡಿಸಲಾಗಿತ್ತು.

   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

4. ಗಾಂಧೀಪುರ ಸಮುದಾಯ ಭವನದ ಹತ್ತಿರ ಹಾಗೂ 5ನೇ ಅಡ್ಡ ರಸ್ತೆಯಲ್ಲಿ ಬೋರ್‌ವೆಲ್‌ಗೆ ಹೊಸದಾಗಿ ಮೋಟಾರನ್ನು ಅಳವಡಿಸುವ ಬಗ್ಗೆ.

   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

5. ಇಮ್ಮಡಿಹಳ್ಳಿಯ ಆರ್.ಓ.ಪ್ಲಾಟ್ ಹತ್ತಿರ, ಕಾಲೇಜಿನ ಹತ್ತಿರ ಹಾಗೂ ಗಣೇಶ ದೇವಸ್ಥಾನದ ಹತ್ತಿರ ಹೊಸದಾಗಿ ಕೊಳವೆಬಾವಿ ಕೊರೆಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

6. ಸುಬ್ಬಣ್ಣ, ನೀರು ಸರಬರಾಜುದಾರರು ತಿಳಿಸಿರುವಂತೆ 20 ಲೇತ್ ಪೈಪ್‌ಲೈನ್ ಕೈತೋಟದ ಹತ್ತಿರ ಬೇಕೆಂದು ತಿಳಿಸಿದ್ದು, ಇಮ್ಮಡಿಹಳ್ಳಿಯಲ್ಲಿ ಮೋಟರ್ ಅಳವಡಿಸಲಾಗಿದೆ. ಹಾಗೂ ಪೈಪ್ ಲೈನ್ ರಿಪೇರಿ ಮಾಡಲಾಗಿದೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

7. ವಿಜಯನಗರ ಗಣೇಶ್ ದೇವಸ್ಥಾನದ ಹತ್ತಿರ ಹೊಸ ಪಂಪ್‌ಮೋಟರ್ ಅಳವಡಿಸಲಾಗಿದೆ, ಹಿಂದೂ ಸ್ಮಶಾನದ ಹತ್ತಿರ ಹೊಸ ಪ್ಯಾನಲ್ ಬೋರ್ಡ್ ಮತ್ತು ವೈಯರಿಂಗ್ ಹೊಸದಾಗಿ ಅಳವಡಿಸಲಾಗಿದೆ. ಮತ್ತು ಸ್ಮಶಾನದ ಹತ್ತಿರ ಬೋರ್‌ವೆಲ್ ರಿಪೇರಿ ಕೆಲಸ ಮಾಡಿಸಲಾಗಿದೆ. ಮತ್ತು ಪೈಪ್‌ಗಳನ್ನು ನಾರಾಯಣಸ್ವಾಮಿ ರವರು ತೆಗೆದುಕೊಂಡಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

8. ಸಿದ್ದಾಪುರ ಪಟೇಲ್ ಬಡಾವಣೆಯಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

9. ಆರ್.ಓ. ಪ್ಲಾಟ್‌ನ ನೀರು ಸರಬರಾಜು ಸಮಸ್ಯೆ ಕುರಿತಂತೆ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಪೈಪ್‌ಲೈನ್ ಸಂಪರ್ಕ ಕಲ್ಪಿಸಬೇಕಾಗಿರುತ್ತದೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

10. ನಾಗೊಂಡನಹಳ್ಳಿ ಹಾಲಿ ಇರುವ ಬೋರ್‌ವೆಲ್‌ಗೆ ಹೊಸದಾಗಿ ಕೇಬಲ್ ಅಳವಡಿಸಬೇಕಾಗಿದ್ದು, ಮೋಟಾರ್‌ನ್ನು ತೆಗೆದುಕೊಂಡು ಹೋಗಿದ್ದು, ಇನ್ನು ಅಳವಡಿಸಿರುವುದಿಲ್ಲ. ಹಾಗೂ ಕಾಲೋನಿ ರಸ್ತೆಯಲ್ಲಿ ಪೈಪ್‌ಲೈನ್ ರಿಪೇರಿ ಮಾಡಬೇಕು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

11. ವಿಜಯನಗರದಿಂದ ಖಾನೆ ರಸ್ತೆ ವರೆಗೆ ಹಾಗೂ ಗಣೇಶ ದೇವಸ್ಥಾನದಿಂದ ಇಮ್ಮಡಿಹಳ್ಳಿ ರಸ್ತೆ ವರೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯು.ಜಿ.ಡಿ ಕೆಲಸ ನಿರ್ವಹಿಸುವುದು.

ಕ್ರಮ: ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

12. ಗಾಂಧೀಪುರದಲ್ಲಿ ಬಿಟ್ಟುಹೋಗಿರುವ ಕಡೆಯಲ್ಲಿ ಕವರಿಂಗ್ ಸ್ಲಾಬ್ ಅಳವಡಿಸುವುದು ಮತ್ತು ಸಮುದಾಯ ಭವನದ ಹತ್ತಿರು ಅಡ್ಡ ಮೋರಿ ನಿರ್ಮಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

13. ಬೈರಪ್ಪ ಬಡಾವಣೆಯಲ್ಲಿ ಚರಂಡಿ ಮತ್ತು ಅಡ್ಡ ಮೋರಿ ಕಾಮಗಾರಿಯನ್ನು ಪ್ರಾರಂಭಿಸುವಂತೆ ತಿಳಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

14. ಗಾಂಧೀಪುರ 5ನೇ ಅಡ್ಡ ರಸ್ತೆ ದಲ್ಲಿ ಅಡ್ಡ ಮೋರಿಯಲ್ಲಿ ಹೂಳು ಮತ್ತು ಮಣ್ಣು ತುಂಬಿದ್ದು, ಇದನ್ನು ತೆರವುಗೊಳಿಸುವುದು ಮತ್ತು ಸ್ಲಾಬ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

15. ವಿಜಯನಗರ ಮುಖ್ಯರಸ್ತೆ ಮತ್ತು 5ನೇ ಅಡ್ಡರಸ್ತೆಯಲ್ಲಿ ಚರಂಡಿಯ ಮೇಲೆ ನಿರ್ಮಿಸಿರುವ ಅನಧಿಕೃತ ಶೀಟ್ ಮನೆಗಳನ್ನು ತೆರವುಗೊಳಿಸುವುದು. ಹಾಗೂ 1ನೇ ರಿಂದ 3ನೇ ಅಡ್ಡ ರಸ್ತೆಯಲ್ಲಿ ಪೈಪ್‌ಲೈನ್ ರಿಪೇರಿ ಮಾಡುವುದು. 5ನೇ ಕ್ರಾಸ್‌ನಲ್ಲಿ ಹೊಸದಾಗಿ ಪೈಪ್‌ಲೈನ್ ಮಾಡುವುದು. ಹಿಂದೂ ಸ್ಮಶಾನದಲ್ಲಿ ಬೋರ್‌ವೆಲ್, ಪ್ಯಾನಲ್ ಬೋರ್ಡ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

16. ವಿಜಯನಗರದ ಚಿಕನ್ ಅಂಗಡಿ_ಮೌಲಾಸ್ ಸುರಬ್ ಡೀಲರ್ಸ್ ರವರು ಅಂಗಡಿಯಿಂದ ಉಳಿಯುವ ತ್ಯಾಜ್ಯವನ್ನು ಚರಂಡಿಯನ್ನು ಹಾಕುತ್ತಿದ್ದು, ಇದರಿಂದ, ನಿವಾಸಿಗಳಿಗೆ ಹಾಗೂ ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದರಿಂದ, ಇದನ್ನು ನಿಲ್ಲಿಸಲು ಹಾಗೂ ಎಲ್ಲಾ ಚಿಕನ್ ಅಂಗಡಿಗಳಿಗೆ ಸೂಚನೆ ನೀಡುವುದು ಮತ್ತು ಕ್ರಮ ವಹಿಸುವಂತೆ ಸೂಚಿಸಲಾಯಿತು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು,

17. ಸಿದ್ದಾಪುರ ಗ್ರಾಮದ ಕುಡಿಯುವ ನೀರಿನ ಸಮಸ್ಯೆಯನ್ನು ಸರಿಪಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

18. ಇಮ್ಮಡಿಹಳ್ಳಿ-ವೆಂಕಟರಮಣ ಮನೆ ಹತ್ತಿರ ಮತ್ತು ದೇವಸ್ಥಾನದ ಹತ್ತಿರ ಚರಂಡಿಗಳಲ್ಲಿನ ಹೂಳನ್ನು ತೆಗೆದು ಸ್ಲಾಬ್ ಅಳವಡಿಸುವುದ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

19. ಹಗದೂರು ಮಾರಮ್ಮ ದೇವಸ್ಥಾನದ ಹತ್ತಿರ ಹಾಗೂ ಖಾನೆ ಮನೆ ಹತ್ತಿರ ಚರಂಡಿ_ಕವರಿಂಗ್ ಸ್ಲಾಬ್‌ಗಳ ಒತ್ತುವರಿಯನ್ನು ತೆರವುಗೊಳಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

20. ಹಗದೂರು_ಹೆಚ್.ಪಿ ಗ್ಯಾಸ್ ರಸ್ತೆಯಲ್ಲಿ ಅಳವಡಿಸಿರುವ ಅನಧಿಕೃತ ನಾಮಫಲಕವನ್ನು ತೆರವುಗೊಳಿಸುವುದು ಹಾಗೂ ಹಗದೂರು_ಮಧು (ಟೀಚರ್) ರವರಿಗೆ ನೋಟೀಸ್ ಜಾರಿ ಮಾಡುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

21. ಗಾಂಧೀಪುರ_4ನೇ ಕ್ರಾಸ್ ಹಾಗೂ ಮಸೀಧಿ ರಸ್ತೆಯಲ್ಲಿನ ರಸ್ತೆ ಒತ್ತುವರಿಯನ್ನು ತೆರವುಗೊಳಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

22. ಗಾಂಧೀಪುರ ಗ್ರಾಮದಲ್ಲಿನ ಬೋರ್‌ವೆಲ್ ರಿಪೇರಿ ಮತ್ತು ಕೇಬಲ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

23. ಗಾಂಧೀಪುರ ಗ್ರಾಮದ ಇಂದಿರಾ ಕ್ಯಾಂಟೀನ್‌ನಿಂದ ರಾಯಲ್ ಪಬ್ಲಿಕ್ ಶಾಲೆ ವರೆಗಿನ ರಸ್ತೆಯಲ್ಲಿ ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯಿಂದ ಒಳಚರಂಡಿ ಮತ್ತು ಕಾವೇರಿ ನೀರಿನ ಕಾಮಗಾರಿಗಾಗಿ ಅಗೆದಿರುವ ರಸ್ತೆಯನ್ನು ಸಂಪೂರ್ಣವಾಗಿ ಸರಿಪಡಿಸಿ, ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿಕೊಡಲು ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

24. ಈಶ್ವರ ದೇವಸ್ಥಾನದ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿಕೊಡಲು ಕೋರಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

25. ಶಿವಕುಂಟಮ್ಮ ರಸ್ತೆಯಲ್ಲಿ ಚರಂಡಿ ನಿರ್ಮಾಣ ಮಾಡಲು ಸಂಬಂಧಪಟ್ಟ ದೂರುಗಳನ್ನು ಪರಿಹರಿಸಲು ಗುರುವಾರದಂದು ಸಭೆಯನ್ನು ನಡೆಸಲು ಸೂಚಿಸಲಾಯಿತು.

ಕ್ರಮ: ಸ.ಕಾ.ಅ(ರ.ಮೂ.ಭೂ.ಸೌ & ವೈಟ್‌ಫೀಲ್ಡ್ ಉವಿ)

26. ಗಾಂಧೀಪುರ ಗ್ರಾಮದ ಶ್ರೀ.ಚಂದ್ರಶೇಖರ್ ಮನೆ ಹತ್ತಿರು ಮೋಟರ್ ರಿಪೇರಿ ಮಾಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

27. ಇಮ್ಮಡಿಹಳ್ಳಿ ಗ್ರಾಮದಲ್ಲಿ ಹಾಲಿ ಇರುವ ಚರಂಡಿಗಳ ಮೇಲೆ ಕಾಂಕ್ರೀಟ್‌ಸ್ಲಾಬ್‌ಗಳನ್ನು ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

28. ಇಮ್ಮಡಿಹಳ್ಳಿ ಗ್ರಾಮದ ರಸ್ತೆಗಳಲ್ಲಿ ಬಿ.ಡಬ್ಲ್ಯೂಎಸ್.ಎಸ್.ಬಿ ಇಲಾಖೆಯಿಂದ ಒಳಚರಂಡಿ ಮತ್ತು ಕಾವೇರಿ ನೀರಿನ ಕಾಮಗಾರಿಗಾಗಿ ಅಗೆದಿರುವ ರಸ್ತೆಯನ್ನು ಸಂಪೂರ್ಣವಾಗಿ ಸರಿಪಡಿಸಿ, ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿಕೊಡಲು ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ

29. ಸಿದ್ದಾಪುರ ಗ್ರಾಮದ ಚರಂಡಿಗಳಲ್ಲಿ ಹೂಳನ್ನು ಮತ್ತು ಡೆಬ್ರೀಸ್‌ನ್ನು ತೆರವುಗೊಳಿಸುವುದು.

ಕ್ರಮ: ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ

30. ಸಿದ್ದಾಪುರ ಗ್ರಾಮದಲ್ಲಿ ಹಾಲಿ ಇರುವ ಚರಂಡಿಗಳ ಮೇಲೆ ಕಾಂಕ್ರೀಟ್ ಸ್ಲಾಬ್‌ಗಳನ್ನು ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

31. ಸಿದ್ದಾಪುರ ಗ್ರಾಮದಲ್ಲಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ

32. ಸಿದ್ದಾಪುರ ಗ್ರಾಮದ ಮುಖ್ಯರಸ್ತೆಗಳಿಗೆ ಡಾಂಬರೀಕರಣ ಮಾಡುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

33. ಸಿದ್ದಾಪುರ ಗ್ರಾಮದ ಬೋರ್‌ವೆಲ್ ರಿಪೇರಿ ಮಾಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84

34. ವಿಜಯನಗರ ಗ್ರಾಮದ ನಾಗರಾಜ್ ಬಡಾವಣೆ_ಸ್ಪಿಂಗ್ ಡೇಲ್ ಬಡಾವಣೆಯ ನಿವಾಸಿಗಳು ರಸ್ತೆ ನಿರ್ಮಾಣ, ಬೀದಿ ದೀಪಗಳು ಹಾಗೂ ಚರಂಡಿ ವ್ಯವಸ್ಥೆ ಕಲ್ಪಿಸಿಕೊಳ್ಳಲು ಮನವಿ (08) ಅರ್ಜಿ ಸಲ್ಲಿಸಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.84/ಬೆಸ್ಕಾಂ

**ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ:84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು**

ಹಗದೂರು ವಾರ್ಡ ನಂ:84 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಡಾ॥ ಶ್ರೀ.ಟಿ.ಎಂ.ರಮೇಶ್, ನೊಡಲ್ ಅಧಿಕಾರಿಗಳು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Balaiah

**ಕಾರ್ಯದರ್ಶಿ**

**ಸಹಾಯಕ ಅಭಿಯಂತರರು**

**ವಾರ್ಡ್ ನಂ: 84 ಹಗದೂರು**

**<u>ಪ್ರತಿಯನ್ನು</u>**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.